ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ಯಾದಗಿರಿ.

ಸಿ.ಸಿ ನಂಃ **517/ 2022**

| | | |
|---|---|---|
| ಸಾಕ್ಷಿಯ ಹೆಸರುಃ | ಚನ್ನಬಸಮ್ಮ | ಪ್ರಾಸಾಃ 5 |
| ಗಂಡನ/ತಂದೆಯ ಹೆಸರುಃ | ಬಸವರಾಜ | ಚಾಸಾಃ 5 |
| ವಯಸ್ಸುಃ | 50 ವರ್ಷ | ದಿಃ 10-10-2024 |
| ಉದ್ಯೋಗಃ | ಮನೆಕೆಲಸ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಯರಗೋಳ | |

ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ ಃ

ಚಾಸಾಃ 1 ನನ್ನ ಅಣ್ಣ. ಚಾಸಾಃ 4 ನನ್ನ ಅಣ್ಣನ ಮಗ. ನನಗೆ ಚಾಸಾಃ 6 ರಿಂದ 8 ರವರು ಹಾಗೂ ಆರೋಪಿತರ ಪರಿಚಯವಿದೆ. ದಿನಾಂಕಃ 06-09-2021 ರಂದು 10.30 ಗಂಟೆ ಸುಮಾರಿಗೆ ಜಗಳವಾಗಿರುತ್ತದೆ. ನಾನು ಕೂಡ ಅಂಗಡಿಯ ಹತ್ತಿರ ಹೋಗಿರುತ್ತೇನೆ. ಚಾಸಾಃ 1 ರವರು ಚಾಸಾಃ 4 ರವರಿಗೆ ಅಂಗಡಿ ಸಾಮಾಗ್ರಿ ತರಲು ಹಣ ಕೊಡುತ್ತೇನೆ ನಿಲ್ಲು ಎಂದು ಹೇಳಿರುತ್ತಾರೆ. ಆರೋಪಿತರು ಎಲ್ಲರೂ ಬಂದು ಚಾಸಾಃ 4 ರವರಿಗೆ ಹೊಡೆಯುತ್ತಿರುವಾಗ ಯಾಕೆ ಹೊಡೆಯುತ್ತೀರಿ ಎಂದು ಕೇಳಿದಾಗ ಚಾಸಾಃ 1 ರವರಿಗೆ ಎದೆಯ ಮೇಲಿನ ಅಂಗಿ ಹಿಡಿದು ಹೊಡೆದಿರುತ್ತಾರೆ. ನಾನು ಯಾಕೆ ಹೊಡೆಯುತ್ತೀರಿ ಎಂದು ಕೇಳಿದಾಗ ನನಗೂ ಕೂಡ ದಬ್ಬಿರುತ್ತಾರೆ. ಚಾಸಾಃ 6 ರವರಿಗೆ ಜಗಳ ಬಿಡಿಸಲು ಕರೆದಿರುತ್ತೇನೆ. ಆಗ 2 ನೇ ಆರೋಪಿತನು ಅಂಗಡಿಯಲ್ಲಿರುವ ಮೊಬೈಲು, ಹಣ ಕಸಿದುಕೊಂಡಿರುತ್ತಾರೆ ನಂತರ ಖಲಾಸ ಮಾಡುತ್ತೇವೆ ಎಂದು ಜೀವ ಬೆದರಿಕೆಯನು ಹಾಕಿರುತ್ತಾರೆ.

**(**ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ನುಡಿಯುತ್ತಿದ್ದುದರಿಂದ ಸರಕಾರಿ ಸಹಾಯಕ ಅಭಿಯೋಜಕರು ಪಾಟಿ ಸವಾಲಿಗಾಗಿ ಅವಕಾಶ ಕೋರಿದ್ದು ನ್ಯಾಯಾಲಯದ ಮುಂದಿರುವ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು**)**

ಆರೋಪಿತರು ಎಲ್ಲರೂ ಚಾಸಾಃ 1 ಮತ್ತು 4 ರವರಿಗೆ ಸೂಳೆ ಮಕ್ಕಳೆ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ. ಸದರಿ 2 ನೇ ಆರೋಪಿತನು ಚಾಸಾಃ 4 ರವರಿಗೆ ಮುಖಕ್ಕೆ ಕೈಯಿಂದ ಹೊಡೆದಿರುತ್ತಾನೆ ಎಂದರೆ ಸರಿ. ಆರೋಪಿತರು ಚಾಸಾಃ 1 ರವರಿಗೆ ಅಡ್ಡಗಟ್ಟಿ ನಿಲ್ಲಿಸಿ ಜೀವ ಬೆದರಿಕೆಯನ್ನು ಹಾಕಿರುತ್ತಾರೆ ಎಂದರೆ ಸರಿ. ನಾನು ಪೊಲಿಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ.

ಪಾಟಿ ಸವಾಲು ಃಆರೋಪಿ ಪರ ಶ್ರೀ. ಜಿ. ಬಿ. ಆರ್. ವಕೀಲರಿಂದ.

ನಾವು ಮತ್ತು ಆರೋಪಿತರು ಸಂಬಂಧಿಕರು ಎಂದರೆ ಸರಿ. ಚಾಸಾಃ 1 ನನ್ನ ಅಣ್ಣ. ಚಸಾಃ 4 ನನ್ನ ಅಣ್ಣನ ಮಗ. ನನಗೆ ಯರಗೋಳ ಗ್ರಾಮದಲ್ಲಿಯೇ ಮದುವೆ ಮಾಡಿಕೊಟ್ಟಿರುತ್ತಾರೆ. ನನ್ನಅಣ್ಣ ಮತ್ತು ನನ್ನ ಮನೆ ದೂರದಲ್ಲಿ ಇದೆ ಎಂದರೆ ಸರಿ. ಆರೋಪಿತರ ಮನೆ ಊರಲ್ಲಿ ಇರುತ್ತದೆ ಎಂದರೆ ಸರಿ. ಸದರಿ ಚಾಸಾಃ 1 ರವರು ಈ ಘಟನೆಗಿಂತ ಮುಂಚೆ ಆರೋಪಿತರನ್ನು ಹೊಡೆದಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ಆರೋಪಿತರು ಪ್ರಕರಣ ದಾಖಲಿಸುತ್ತಾರೆ ಎಂಬ ಉದ್ದೇಶದಿಂದ ಈ ಪ್ರಕರಣವನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ. ಮೊಬೈಲ ಮತ್ತು ಹಣ ಕಸಿದುಕೊಂಡಿದ್ದರ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿರುತ್ತೇನೆ. ಎಷ್ಟು ಹಣ ಯಾರಿಂದ ಕಸಿದುಕೊಂಡಿರುತ್ತಾರೆ ಎಂದರೆ ಸಾಕ್ಷಿಯು 2 ನೇ ಆರೋಪಿತನು 80 ಸಾವಿರ ರೂ. ಹಣ ಕಸಿದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಈ ವಿಷಯವನ್ನು ಹುಟ್ಟಿಸಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಅಂಗಡಿಯ ಹತ್ತಿರ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಆರೋಪಿತರು ಜೀವ ಬೆದರಿಕೆಯನು ಹಾಕಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇರುವುದಿಲ್ಲ.

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು ಯಾದಗಿರಿ